17

# ಪ್ರಶ್ನೆ:

# “ಸಭೆಯ ನಿತ್ಯವಾದ ಅಂತಿಮ ಸ್ಥಿತಿಯ ಬಗ್ಗೆ ಬೈಬಲ್ ಏನನ್ನು ಬೋಧಿಸುತ್ತದೆ?”

## ಉತ್ತರ:

*ಈ ಅಂತಿಮ ಪ್ರಶ್ನೆಯು ನಂಬಿಗಸ್ತರಿಗಾಗಿ ಕಾದುಕೊಂಡಿರುವ ಬಹುಮಾನದ ಮೇಲೆ ಕೇಂದ್ರಿಕರಿಸಿರುತ್ತದೆ (ಪ್ರಕಟನೆ 2:10). ಈ ಅಧ್ಯಯನವು ಪ್ರತಿಯೊಬ್ಬ ವಾಚಕನನ್ನು ಹೊಸ ಒಡಂಬಡಿಕೆಯ ಸಭೆಯ ನಂಬಿಗಸ್ತ ಸದಸ್ಯನಾಗಿರುವ ಅಪೇಕ್ಷೆಯುಳ್ಳವವನನ್ನಾಗಿ ಮಾಡಿರುವದೆಂದು ನಿರೀಕ್ಷಿಸುತ್ತೇವೆ.*

ಕ್ರಿಸ್ತನಲ್ಲಿ ದೇವರ ನಿತ್ಯವಾದ ಉದ್ದೇಶಕ್ಕನುಗುಣವಾಗಿ ಸಭೆಯು ಸ್ಥಾಪಿಸಲ್ಪಟ್ಟಿತು ಎಂಬ ಯೋಚನೆಯು ಎಷ್ಟು ರೋಮಾಂಚನಕಾರಿಯಾದದ್ದಾಗಿರುತ್ತದಲ್ಲವೇ! ದೇವರ ವಿವಿಧ ಜ್ಞಾನವು “ತಲತಲಾಂತರಕ್ಕೂ ಯುಗಯುಗಾಂತರಕ್ಕೂ” ಸಭೆಯನ್ನು ಸಂಕಲ್ಪಿಸಿತು (ಎಫೆಸ 3:10, 11, 21). ಜಗದುತ್ಪತ್ತಿಗಿಂತ ಮೊದಲು, ಪ್ರೀತಿಸುವ ದೇವರ ಮನಸ್ಸಿನಲ್ಲಿ, ಪರಲೋಕದಲ್ಲಿ ಸಭೆಯ ನಿತ್ಯವಾದ ಅಂತಿಮ ಸ್ಥಿತಿಯು ಆಗಲೇ ಮುಂಚಿತವಾಗಿ ತೀರ್ಮಾನಿಸಲ್ಪಟ್ಟಿತು (1 ಪೇತ್ರ 1:20).

ನಿಜವಾಗಿಯೂ, ಒಬ್ಬನು “ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸುವನು” (ಇಬ್ರಿಯ 6:5) ಅವನು ಪರಲೋಕದ ಜಗತ್ತಿನ ಬೈಬಲಿನ ವಿವರಣೆಗಳ ಮೇಲೆ ಧ್ಯಾನ ಮಾಡುವಾಗ ಹಾಗೆ ಆಗುವುದು. ನಮ್ಮ ನಿತ್ಯವಾದ ಅಂತಿಮ ಸ್ಥಿತಿಯ ಭಿನ್ನವಾದ ಉದಾಹರಣಗಳನ್ನು ಉಪಯೋಗಿಸಿ, ಆ ಉತ್ತಮವಾದ ಜಗತ್ತಿಗಾಗಿ ಕ್ರೈಸ್ತರು ಬಯಸುವಂತೆ ಬೈಬಲು ಮಾಡುವುದು.

### ಜೀವವೃಕ್ಷದ ಪಾಲು ತೆಗೆದು ಕೊಳ್ಳುವುದು

ಏದೆನ್ ತೋಟದಲ್ಲಿ ಜ್ಞಾನವೃಕ್ಷವಲ್ಲದೇ, ಜೀವಕೊಡುವ ಶಕ್ತಿಯ ಮರವೂ ಸಹ ಇತ್ತು. ಅದು “ಜೀವವೃಕ್ಷ” ಎಂದು ಕರೆಯಲ್ಪಡುತ್ತಿತ್ತು. ಅದು ದೃಶ್ಯವಾದ ಮತ್ತು ನಿಜವಾದ ಮರವಾಗಿತ್ತು. ಒಬ್ಬನು “ತನ್ನ ಕೈಚಾಚಿ, ತೆಗದುಕೊಂಡು” ಅದನ್ನು “ತಿಂದು, ಎಂದೆಂದಿಗೂ ಜೀವಿಸಬಹುದಿತ್ತು” (ಆದಿಕಾಂಡ 3:22). ಆದಾಮ ಮತ್ತು ಹವ್ವರು ಅಯೋಗ್ಯರೆಂದು ತೋರಿಸಿಕೊಟ್ಟಾಗ, ದೇವರು ಆ ಅಮೂಲ್ಯವಾದ ಮರದಿಂದ ಅವರನ್ನು ಬೇರೆ ಮಾಡಿ, ಅದನ್ನು ಕಾಯಲು ಕೆರೂಬಿಯನ್ನು ಕಳುಹಿಸಿದನು, ಅದು ತೋಟದಲ್ಲಿ ಎಷ್ಟು ದಿನ ಇತ್ತು ಮತ್ತು ಅದಕ್ಕೆ ಏನಾಯಿತು ಎಂಬುದನ್ನು ಯಾರೂ ತಿಳಿದಿರುವದಿಲ್ಲ. ಆದಿಕಾಂಡದ ನಂತರ ಅರವತ್ನಾಲ್ಕು ಪುಸ್ತಕಗಳಲ್ಲಿ ಆ ಅಮೂಲ್ಯವಾದ ಮರವು ನಮೂದಿಸಲ್ಪಟ್ಟಿರುವದಿಲ್ಲ. (ಜ್ಞಾನೋಕ್ತಿ 11:30 ಹೊರತಾಗಿರುವದಿಲ್ಲ.)

ಹಾಗಿದ್ದರೂ, ಪರಲೋಕದ ನಿತ್ಯವಾದ ಯೋಜನೆಯಂತೆ, ಆ ಮರವು ಮೆರೆಯಲ್ಪಟ್ಟಿರುವದಿಲ್ಲ. ಅದರ ವಿಚಾರವು ಪ್ರಕಟನೆ ಗ್ರಂಥದಲ್ಲಿ ನವೀಕರಿಸಲ್ಪಟ್ಟಿದೆ - ದೃಶ್ಯವಾದದ್ದಾಗಿ ಅಲ್ಲ, ನಿಜವಾದದ್ದಾಗಿ ಅಲ್ಲ, ಭೂಲೋಕದ್ದಾಗಿ ಅಲ್ಲ, ಆದರೆ ಪರಲೋಕದಲ್ಲಿ ಆತ್ಮಿಕವಾದ ಉದಹರಣೆಯಂತೆ ಎದೇನಿನ ಮರದಿಂದ ಪ್ರತಿನಿಧೀಕರಿಸಲ್ಪಟ್ಟ ಜೀವವು ಈಗ ಪರಲೋಕದ ಒಂದು ಮರದಿಂದ ಮುಂದಿಡಲ್ಪಟ್ಟಿದೆ ಎಂಬುದರಲ್ಲಿ ಆನಂದಿಸುತ್ತೇವೆ (ಪ್ರಕಟನೆ 2:7).

ಸಾಮಾನ್ಯ ಜನರು ಜೀವವನ್ನು ಪ್ರೀತಿಸುತ್ತಾರೆ ಮತ್ತು ಒಳ್ಳೆಯ ದಿನಗಳನ್ನು ನೋಡಲು ಬಯಸುತ್ತಾರೆ (1 ಪೇತ್ರ 3:10). ಕ್ರಿಸ್ತನು ಜೀವವನ್ನು ತರಲು ಮತ್ತು ಅದನ್ನು ಹೆಚ್ಚು ಸಮೃದ್ಧಿಯಾಗಿ ಒದಗಿಸಲು ಬಂದನು (ಯೋಹಾನ 10:10). ಸುವಾರ್ತೆಯ ಮುಖಾಂತರ ಆತನು ಮರಣವನ್ನು ನಾಶ ಪಡಿಸಿದನು ಮತ್ತು ಜೀವವನ್ನೂ ಅಮರತ್ವವನ್ನೂ ಬೆಳಕಿಗೆ ತಂದನು (2 ತಿಮೋತೆ 1:10). ಆತನು ಮಾತ್ರವೇ "ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿ ಬಿಡುವದಕ್ಕೂ ಮತ್ತು ಮರಣ ಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸತ್ವದೊಳಗಿದ್ದವರನ್ನು ಬಿಡಿಸುವದಕ್ಕೂ ... ಶಕ್ತನಾಗಿದ್ದಾನೆ" (ಇಬ್ರಿಯ 2:14, 15). ಆತನು ಮಾತ್ರವೇ, "ಹೆದರಬೇಡ, ನಾನು ಮೊದಲನೆಯವನೂ ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ. ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ" (ಪ್ರಕಟನೆ 1:17, 18) ಎಂದು ಹೇಳಬಲ್ಲನು.

ಯೇಸು ಮಾಡಿದ ಒಳ್ಳೇ ಕಾರ್ಯದಿಂದ, ನಂಬಿಗಸ್ತ ಸಭೆಯ ಸದಸ್ಯರು ಸಾಂಕೇತಿಕವಾಗಿ ಜೀವವೃಕ್ಷವು ಪುನಃ ನೆಡಲ್ಪಟ್ಟ ಸ್ಥಳದಲ್ಲಿ ಜೀವಿಸುವ ಅವಕಾಶ ಹೊಂದಿಕೊಳ್ಳುವರು ಎಂದಾಗುತ್ತದೆ. ಅದರ ಫಲಕ್ಕೆ ಸಮೀಪಿಸಲು ಯಾವ ಕೆರೂಬಿಯೂ ತಡೆಯುವದಿಲ್ಲ; ಆದಾಗ್ಯೂ ಪ್ರತಿಯೊಬ್ಬ ಸಭಾಸದಸ್ಯನು ಅದನ್ನು ತಿನ್ನಲಾರನು "ಆ ವಯಸ್ಸನ್ನು ಹೊಂದಿ, ಸತ್ತವರೊಳಗಿಂದ ಪುನರುತ್ಥಾನ ಹೊಂದುವವರು ಯೋಗ್ಯರು" ಎಂದು ತಿಳಿಯಲ್ಪಡುತ್ತಾರೆ, ಅವರಿಗೆ ಆ ಅವಕಾಶವಾಗಿರುವುದು. ಪರಲೋಕದ ಮರದಿಂದ ಹಣ್ಣನ್ನು ತಿನ್ನುವವರು ಇನ್ನು ಮುಂದೆ ಸಾಯುವದಿಲ್ಲ, "ಯಾಕಂದರೆ ಅವರು ಪುನರುತ್ಥಾನವನ್ನು ಹೊಂದಿದವರಾಗಿದ್ದು ದೇವದೂತರಿಗೆ ಸರಿಸಮಾನರೂ ದೇವರ ಮಕ್ಕಳೂ ಆಗಿದ್ದಾರೆ" (ಲೂಕ 20:35, 36).

ಜೀವವೃಕ್ಷದ ಮೂಲ ಸ್ಥಳವು "ಏದೆನ್" ಎಂದು ಹೆಸರಿನ ತೋಟದಲ್ಲಿತ್ತು. ಈ ಪದದ ಅರ್ಥ "ಆಹ್ಲಾದಕರವಾದದ್ದು" ಎಂದು. ಎರಡನೆಯ ಮರವು "ಪ್ಯಾರಡೈಜ್" ಎಂದು ಕರೆಯುವ ಸ್ಥಳದಲ್ಲಿದೆ. ಈ ಪದದ ಅರ್ಥ "ಒಂದು ಪಾರ್ಕ ಇಲ್ಲವೇ ಕಾದಿಟ್ಟ ಸ್ಥಳ, ಸುಖದಾಯಕ ಸ್ಥಳ" ಎಂದಾಗುತ್ತದೆ.[1] ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು ಬರುವ ಸ್ಫಟಿಕದಂತೆ ಪ್ರಕಾಶಮಾನವಾಗಿದ್ದ "ಜೀವಜಲದ ನದಿಯನ್ನು ಒಳಗೊಂಡಿರುವ ಪಾರ್ಕಿನಂತೆ ಇಲ್ಲವೇ ತೋಟದಂತೆ ಪರಲೋಕವು ಚಿತ್ರೀಕರಿಸಲ್ಪಟ್ಟಿದೆ" (ಪ್ರಕಟನೆ 22:1). ನದಿಯ ಎರಡೂ ಬದಿಗಳಲ್ಲಿ "ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲವನ್ನು ಫಲಿಸುತ್ತ - ಹನ್ನೆರಡು ತರದ ಫಲಗಳನ್ನು ಕೊಡುತ್ತದೆ. ಆ ಮರದ ಎಲೆಗಳು ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿದೆ" (ಪ್ರಕಟನೆ 22:2).

## ಜೀವವೆಂಬ ಜಯಮಾಲೆ ಧರಿಸುವುದು

ನಂಬಿಗಸ್ತ ಸಭಾಸದಸ್ಯರ ನಿತ್ಯವಾದ ಅಂತಿಮ ಸ್ಥಿತಿಯನ್ನು ಚಿತ್ರಿಸುವ

ಎರಡನೆಯ ರೂಪಕವು ಒಂದು ಕಿರೀಟವನ್ನು (ಜಯಮಾಲೆಯನ್ನು) ಧರಿಸುವುದಾಗಿದೆ (ಪ್ರಕಟನೆ 2:10). ವಾಗ್ದತ್ತ ಕಿರೀಟವು ಒಂದು *diadema* - ಮಕುಟ, ಒಬ್ಬ ಅರಸನಿಂದ ಅವನ ಮಗನಿಗೆ ಒಪ್ಪಿಸಿಕೊಡುವ ರಾಜಕಿರೀಟ ಆಗಿರುವದಿಲ್ಲ. ಸಾಂಕೇತಿಕವಾಗಿ ಮಾತಾಡುವದಾದರೆ ಅದು ಒಂದು *stephanos*, ಒಂದು ಹೂಮಾತಿ (wreath) ಇಲ್ಲವೇ ಪುಷ್ಪಹಾರ, ಪುರಾತನ ಪಂದ್ಯಾಟಗಳಲ್ಲಿಯ ಜಯದ ಬಿಲ್ಲೆ (a badge of victory) ಆಗಿತ್ತು. ಓಲಂಪಿಕ್‌ದ ಹೂವುಗಳ ಕಿರೀಟವು ನಾಶವಾಗಿ ಹೋಗುವಂಥದ್ದಾಗಿತ್ತು; ಆದರೆ ಕ್ರಿಸ್ತನ ಕಿರೀಟವು ನಾಶವಾಗದಂಥದ್ದು ಆಗಿದೆ (1 ಕೊರಿಂಥ 9:25). ಓಲಂಪಿಕ್ ಕಿರೀಟವು ಬಾಡಿಹೋಗುವಂಥದ್ದಾಗಿತ್ತು. ಆದರೆ ಕ್ರೈಸ್ತನು ಎಂದೂ ಬಾಡಿ ಹೋಗದ ಮಹಿಮೆಯ ಕಿರೀಟವನ್ನು ಹೊಂದಿಕೊಳ್ಳುವನು (1 ಪೇತ್ರ 5:4). ಪರಲೋಕ ರಾಜ್ಯದಲ್ಲಿ ತನಗಾಗಿ ನೀತಿಯ ಕಿರೀಟವು ಕಾದಿದೆಯೆಂದು ಪೌಲನು ಆನಂದಪಟ್ಟನು (2 ತಿಮೊಥೆ 4:8).

## ಮನ್ನವನ್ನು ತಿನ್ನುವುದು

ನಿತ್ಯಜೀವದ ಮೂರನೆಯ ಚಿತ್ರವು ಅರಣ್ಯದಲ್ಲಿ ಇಬ್ರೀಯರ ಸಂಚಾರಕ್ಕೆ ಹಿಂದೆ ಹೋಗುತ್ತದೆ. ದೇವರು ಆಹಾರವನ್ನು ಆದ್ಭುತಕರವಾಗಿ ಒದಗಿಸಿರದಿದ್ದರೆ ಈ ಜನಾಂಗವು ಹಸಿವೆಯಿಂದ ಸತ್ತುಹೋಗುತ್ತಿತ್ತು. ರಾತ್ರಿಕಾಲದಲ್ಲಿ ಮಂಜು ಪಾಳೆಯದಲ್ಲಿ ಬೀಳುತ್ತಿದ್ದಾಗ ಅದರೊಂದಿಗೆ "ಮನ್ನವೂ" ಬೀಳುತ್ತಿತ್ತು (ಅರಣ್ಯಕಾಂಡ 11:9). ಅದು ರುಚಿಯಲ್ಲಿ ಜೇನುತುಪ್ಪ ಕಲಸಿದ ತೆಳುವಾದ ಅಂಟಿನ ಬಿಲ್ಲೆಯ ಹಾಗಿತ್ತು (ವಿಮೋಚನಕಾಂಡ 16:31). ಈ ಆಹಾರದ ಮುಖಾಂತರವಾಗಿ ದೇವರು ಅರಣ್ಯ ಸಂಚಾರದ ನಲ್ವತ್ತು ವರ್ಷಗಳಲ್ಲಿ ತನ್ನ ಜನರನ್ನು ಜೀವಿಸಿರುವಂತೆ - ಕಾಪಾಡಿದನು. ಪರಲೋಕದಿಂದ ಈ ಆಹಾರವನ್ನು ಸೆಫ್ಟುವಗಿಂತವು *arton angelon*, "ದೇವದೂತರ ಆಹಾರ" (ಕೀರ್ತನೆ 78:25) ಎಂದು ಕರೆಯುತ್ತದೆ. KJV ಇದನ್ನು " 'ದೇವದೂತರ' ಆಹಾರ" ಎಂದು ಕರೆಯುತ್ತದೆ. ಬಹುಶಃ ಇದರ ಅರ್ಥ ದೇವರು ತನ್ನ ದೂತರ ಮುಖಾಂತರ ಆಹಾರ ಒದಗಿಸಿದನು ಎಂದಾಗುತ್ತದೆ. ಇಬ್ರಿಯರಿಗೆ ಪ್ರಕೃತಿಕ ಮನ್ನವು ಮರಣ ಮತ್ತು ಜೀವದ ಮಧ್ಯದಲ್ಲಿ ಭಿನ್ನತೆಯಾಗಿದ್ದಂತೆ, ಆತ್ಮಿಕವಾಗಿ ಪರಲೋಕದಲ್ಲಿ ವಿಮೋಚಿತರು ಸಾದಾಕಲ ಪೋಷಿಸಲ್ಪಡುವುದು "ಮನ್ನ" ಎಂದು ಕರೆಯಲ್ಪಟ್ಟಿದೆ (ಪ್ರಕಟನೆ 2:17).

## ಕೆತ್ತಿದ ಬಿಳೀ ಕಲ್ಲು ಕೊಡಲ್ಪಡುವುದು

ನಿತ್ಯವಾದ ಆಶೀರ್ವಾದಗಳ ನಾಲ್ಕನೆಯ ವಿವರಣೆಯು ಯೇಸುವು ಪ್ರತಿಯೊಬ್ಬ ನಂಬಿಗಸ್ತ ಕ್ರೈಸ್ತನಿಗೆ ಬಿಳೀ ಕಲ್ಲನ್ನು ಕೊಡುವುದು (ಪ್ರಕಟನೆ 2:17). ರೋಮನ್ ನ್ಯಾಯವಿಚಾರಣೆಗಳಲ್ಲಿ ನ್ಯಾಯತೀರ್ಪು, ಅಪರಾಧವನ್ನು ಕಪ್ಪು ಕಲ್ಲಿನಿಂದ, ಬಿಡುಗಡೆಯನ್ನು ಬೀಳಿ ಕಲ್ಲಿನಿಂದ ಸೂಚಿಸಲ್ಪಡುತ್ತಿತ್ತು. ಪರಲೋಕದ ಜಗತ್ತಿನಲ್ಲಿ, ಆತ್ಮನಿಗೆ ಅನುಗುಣವಾಗಿ ನಡೆಯುವವರಿಗೆ ಸಂಬಂಧಿಸಿ ಈಗ ಸತ್ಯವಾಗಿರುವಂತೆ "ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ" (ರೋಮಾಪುರ 8:1). ಬಿಡುಗಡೆಯ ಬಿಳೀ ಕಲ್ಲು ರಕ್ಷಣೆಯ ವೈಯಕ್ತಿಕತೆಯನ್ನೂ ಪ್ರದರ್ಶಿಸುತ್ತದೆ. ಅದು ಇಡೀ ಸಭೆಯು ಒಂದು ಬಿಳೀ ಕಲ್ಲನ್ನು ಸ್ವೀಕರಿಸುವಂಥದ್ದಲ್ಲ; ಪ್ರತಿಯೊಬ್ಬ, ನಂಬಿಗಸ್ತ ಕ್ರೈಸ್ತನು ಸ್ವೀಕರಿಸುವಂಥದ್ದಾಗಿರುತ್ತದೆ.

ಇದಲ್ಲದೇ ಸ್ವೀಕರಿಸುವವನಿಗೆ ತಿಳಿಯಲ್ಪಟ್ಟ ವೈಯಕ್ತಿಕ ಹೆಸರು ಮಾತ್ರವೇ ಕೆತ್ತಲ್ಪಡುವದರಿಂದ, ಕಲ್ಲು ವೈಯಕ್ತಿಕ ಗುರುತಿಸುವಿಕೆಯನ್ನು ಹಾಗೂ ಕರ್ತನಿಂದ

ಬಹುಮಾನಗಳನ್ನು ತೋರಿಸುವಂತೆ ಕಾಣುತ್ತದೆ. ಒಬ್ಬನು ಪರಲೋಕಕ್ಕೆ ಹೋಗು ವಿಕೆಯು (ಕಪ್ಪು ಕಲ್ಲಿನ ಬದಲಾಗಿ ಒಂದು ಬಿಳೀ ಕಲ್ಲನ್ನು ಅವನು ಸ್ವೀಕರಿಸುವದರಿಂದ ತೋರಿಸಲ್ಪಟ್ಟದ್ದು) ಅದ್ಭುತಕರವಾದದ್ದಾಗಿದೆ; ಆದರೆ, ಪ್ರತಿಯೊಂದು ಕಲ್ಲಿನ ಮೇಲೆ ವೈಯಕ್ತಿಕ ಹೆಸರನ್ನು ಕೆತ್ತುವದರಿಂದ ಕರ್ತನು ಆ ಉತ್ತಮವಾದ ನಾಡಿನಲ್ಲಿ ಆನಂದದ ಹಂತಗಳನ್ನು ಬಹುಮಾನವಾಗಿ ಕೊಡುವುದು. ಆದುದರಿಂದ, ಕ್ರೈಸ್ತರು ಭಾಗಶಃವಾದ ಇಲ್ಲವೇ ಸಾಮಾನ್ಯವಾದ ಬಹುಮಾನಕ್ಕಾಗಿ ಅಲ್ಲ ಆದರೆ "ಪೂರ್ಣ ಬಹುಮಾನಕ್ಕಾಗಿ" (2 ಯೋಹಾನ 8) ಕಾರ್ಯದಲ್ಲಿ ತೊಡಗಿರುವರು. ಪ್ರತಿಯೊಬ್ಬ ಮಾರ್ಪಾಟು ಹೊಂದಿದವನು ನಂಬಿಗಸ್ತನಾಗಿದ್ದು ಪರಲೋಕಕ್ಕೆ ಹೋಗುವನು ತಾನೇ ಪ್ರಾಣಗೆಲ್ಲುವವನಿಗೆ ಬಹುಮಾನದ ಭಾಗವಾಗಿದ್ದಾನೆ (ನೋಡಿರಿ 1 ಕೊರಿಂಥ 3:14). ಅವನು ಆ ಪ್ರಾಣಗೆಲ್ಲುವವನಿಗೆ ಕರ್ತನ ಆಗಮದಲ್ಲಿ ಒಂದು "ಮಹಿಮೆಯ ಕಿರೀಟ ವಾಗುತ್ತಾನೆ." ಪೌಲನು ಥೆಸಲೊನೀಕದಲ್ಲಿಯ ಕ್ರೈಸ್ತರಿಗೆ ಹೀಗೆಬರೆದನು, "ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ ಆತನ ಮುಂದೆ ನಮ್ಮ ಭರವಸವೂ ನಮ್ಮ ಸಂತೋಷವೂ ನಾವು ಹೊಗಳಿಕೊಳ್ಳುವ ಜಯಮಾಲೆಯೂ ಯಾರೂ? ನೀವೇ ಅಲ್ಲವೇ. ನಿಜವಾಗಿ ನೀವೆ ನಮ್ಮ ಗೌರವವೂ ಸಂತೋಷವೂ ಆಗಿದ್ದೀರಿ" (1 ಥೆಸಲೊ ನೀಕ 2:19, 20).

## ಬಿಳಿಯವಸ್ತ್ರಗಳನ್ನು ಧರಿಸಿಕೊಳ್ಳುವುದು

ಶುದ್ಧ ಜೀವಿತಗಳನ್ನು ನಡಿಸಲು ಕ್ರೈಸ್ತರನ್ನು ಪ್ರೋತ್ಸಾಹಿಸುವ ಐದನೆಯ ಚಿತ್ರವು ಪರಲೋಕದಲ್ಲಿರುವವರಿಗೆ ಕೊಡಲ್ಪಟ್ಟ ವಸ್ತ್ರಗಳು: ಬಿಳಿಯ ಬಟ್ಟೆಗಳು (ಪ್ರಕಟನೆ 3:5). ಇದಕ್ಕೆ ವಿರುದ್ಧವಾಗಿ, ನೋಡಲಾಗದ ಒಬ್ಬ ವ್ಯಕ್ತಿಯ ಬಗ್ಗೆ ಮಾಡಬೇಕೆಂದು ದೇವರ ಆಜ್ಞೆಗಳಲ್ಲಿ ಒಂದನ್ನು ಜ್ಞಾಪಕಕ್ಕೆ ತರುತ್ತದೆ: "ಇವನ ಕೊಳೆಬಟ್ಟೆಗಳನ್ನು ತೆಗೆದು ಬಿಡಿರಿ" (ಜೆಕರ್ಯ 3:4). "ಕ್ರೈಸ್ತರು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ... ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ" ಪರಿಶುದ್ಧತೆಯನ್ನು ಸಿದ್ಧಿಗೆ ತರುವಾಗ (2 ಕೊರಿಂಥ 7:1), ಅವರು ತಮಗೆ ಪರಲೋಕದಲ್ಲಿ ಕಲೆಯಿಲ್ಲದ ಮತ್ತು ಶುದ್ಧವಾದ ಬಟ್ಟೆಗಳನ್ನು ಹೊಂದುವದಕ್ಕಾಗಿ ಸಿದ್ಧತೆ ಮಾಡಿಕೊಳ್ಳುತ್ತಿರುವರು. ಅವರ ಬಗ್ಗೆ ಕರ್ತನು ನಾಚಿಕೆಪಟ್ಟುಕೊಳ್ಳುವದಿಲ್ಲ; "ಅವರು ಯೋಗ್ಯರಾಗಿರುವದರಿಂದ ಬಿಳಿವಸ್ತ್ರಗಳನ್ನು ಧರಿಸಿಕೊಂಡು ನನ್ನ ಜೊತೆಯಲ್ಲಿ ನಡೆಯುವರು" (ಪ್ರಕಟನೆ 3:4) ಎಂದು ಆತನು ಆಗಲೇ ಘೋಷಿಸಿರುವನು.

"ಯೋಗ್ಯರಾಗಿರುವುದು" ಎಂಬ ಪದವು ಒಳಗೊಂಡಿರುವಕೆಯಲ್ಲಿ ಅರ್ಥಮಾಡಿಕೊಳ್ಳಲ್ಪಡಬೇಕು. ಗರಿಷ್ಠತೆಯಲ್ಲಿ, "ನಮ್ಮ ಧರ್ಮಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ" (ಯೆಶಾಯ 64:6). "ನಾವು ಮಾಡಿದ ಪುಣ್ಯ ಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆದಲ್ಲಿಯೇ ... ಆತನು ನಮ್ಮನ್ನು ರಕ್ಷಿಸಿದನು" (ತೀತ 3:5). ನಾವು ಪ್ರತಿಯೊಂದು ಆಜ್ಞೆಯನ್ನು ಕೈಕೊಂಡರೂ, ನಾವು ನಮ್ಮ ಕೆಲಸಮಾಡುವ ಪ್ರಯೋಜನವಿಲ್ಲದ ಆಳುಗಾಳಾಗಿದ್ದೇವೆ (ಲೂಕ 17:10). ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ ಆದರೆ "ಕೃಪೆಯಿಂದ ಆದುಕೊಂಡನು ಅಂದ ಮೇಲೆ ಪುಣ್ಯ ಕ್ರಿಯೆಗಳ ಕಾರಣದಿಂದ ಆದುಕೊಳ್ಳಲಿಲ್ಲವಷ್ಟೇ; ಹಾಗಲ್ಲದ ಪಕ್ಷಕ್ಕೆ ಕೃಪೆಯನ್ನು ಇನ್ನು ಕೃಪೆಯನ್ನುವದಕ್ಕಾಗುವದಿಲ್ಲ" (ರೋಮಾಪುರ 11:6; KJV). ತನ್ನ ರಕ್ಷಣೆಯನ್ನು ಸಂಪಾದಿಸಿಕೊಳ್ಳುವದರಲ್ಲಿ ಯಾವನೂ ತನ್ನನ್ನು ಕೊಚ್ಚಿಕೊಳ್ಳಲಾರನು (ಎಫೆಸ 2:8, 9); ಆದಾಗ್ಯೂ ನಾವು ಕರ್ತನ ಆಜ್ಞೆಗಳಿಗೆ ವಿಧೇಯರಾಗದಿದ್ದರೆ (ಮತ್ತಾಯ

7:21), ದೇವರ ಪಟ್ಟಣದೊಳಗೆ ದ್ವಾರಗಳಿಂದ ನಾವು ಪ್ರವೇಶಿಸುವುದಿಲ್ಲ (ನೋಡಿರಿ ಇಬ್ರಿಯ 5:9; ಪ್ರಕಟನೆ 22:14). ನಾವು ಅಯೋಗ್ಯರಾಗಿದ್ದರೂ, ನಾವು ಆತನ ರಕ್ತದ ಬುಗ್ಗೆಯಲ್ಲಿ ತೊಳೆಯಲ್ಪಡುವಾಗ, ನಮ್ಮನ್ನು ನೀತಿವಂತರಂತೆ ಎಣಿಸಲು ಕರ್ತನು ಸಿದ್ಧನಾಗಿರುತ್ತಾನೆ (ಜೆಕರ್ಯ 13:1; 1 ಕೊರಿಂಥ 6:11; ಪ್ರಕಟನೆ 1:5).

## ಅಧಿಕಾರ ಹೊಂದಿಕೊಂಡಿರುವುದು

ನಿತ್ಯವಾದ ಸಂತೋಷದ ಪರಿಸ್ಥಿತಿಯ ಇನ್ನೊಂದು ಭಾಗವು ಜಯಿಸುವ ಎಲ್ಲರಿಗೂ ಕೊಡಲ್ಪಟ್ಟ ಅಧಿಕಾರ. ಎರಡನೆಯ ಕೀರ್ತನೆಯು ಯೇಸುವು ಜನಾಂಗಗಳನ್ನು ಕಬ್ಬಿಣದ ದಂಡೆಯಿಂದ ಆಳುವದನ್ನು ಮುಂತಿಳಿಸಿತು (ಉರಿಯುವ ಬೆಂಕಿಯೊಂದಿಗೆ ತನ್ನ ಬಲಶಾಲಿ ದೇವದೂತರೊಂದಿಗೆ ಆತನು ಬರುವಾಗ; 2 ಥೆಸಲೊನೀಕ 1:7-9). ತನ್ನ ಬಗ್ಗೆ ದಾವೀದನು ಹೇಳಿದ್ದನ್ನು ಯೇಸುವು ಜ್ಞಾಪಿಸಿಕೊಂಡನು, ಮತ್ತು ಆತನು ಜನಾಂಗಗಳ ಮೇಲೆ ತನ್ನ ಆಳಿಕೆಯಲ್ಲಿ ತನ್ನೊಂದಿಗೆ ಹಂಚಿಕೊಳ್ಳುವವರೊಳಗೆ ತನ್ನ ಶಿಷ್ಯರನ್ನು ಕೂಡಿಸಿದನು (ಪ್ರಕಟನೆ 2:27). ಕರ್ತನು ಜಗತ್ತಿನ ರಾಜ್ಯಗಳನ್ನು ನಿಶ್ಚಯವಾಗಿಯೂ ವಶಪಡಿಸಿಕೊಳ್ಳುವಾಗ ಕ್ರೈಸ್ತರು ಆತನ ಪಕ್ಕದಲ್ಲಿರುವರು (ಪ್ರಕಟನೆ 11:15).

ಒಂದು ಅರ್ಥದಲ್ಲಿ, ಕ್ರೈಸ್ತರು ಈ ಜೀವನದಲ್ಲಿ ಆಗಲೇ ಕ್ರಿಸ್ತನೊಂದಿಗೆ ಆಳುತ್ತಿರುವರು. ಅವರು ಪಾಪದ ಬಲವನ್ನು ಜಯಿಸಿದಾಗ, ಅದು ತಮ್ಮ ದೇಹಗಳಲ್ಲಿ ಆಳುವದನ್ನು ನಿರಾಕರಿಸಿದಾಗ, ಅವರು ಆಳುತ್ತಿರುವರು (ರೋಮಾಪುರ 6:12). ಅವರು ಈಗ ಅರಸರು (ಅಥವಾ "ಒಂದು ರಾಜ್ಯ") ಮತ್ತು ಯಾಜಕರು (ಕೊಲೊಸ್ಸೆ 1:13; ಪ್ರಕಟನೆ 1:6; 5:10). KJV ಮತ್ತು NASBಗಳು ಪ್ರಕಟನೆ 5:10ರಲ್ಲಿ ಕ್ರೈಸ್ತರು ಭೂಮಿಯ ಮೇಲೆ ಆಳುವರು ಎಂದು ಹೇಳುವಲ್ಲಿ ತಪ್ಪಾದ ಮೂಲಪ್ರತಿಯನ್ನು ಅನುಸರಿಸಿರುವರು. ASVಯು ಪ್ರಕಟನೆ 5:10ರಲ್ಲಿ ಹೇಳಿದಂತೆ ಭೂಲೋಕದ ಮೇಲೆ ಅವರು ಆಡಳಿತೆ ನಡಿಸುವದೆಲ್ಲವೂ ಈಗ ಇರುತ್ತದೆ ("... ಅವರು ಭೂಮಿಯ ಮೇಲೆ ಆಳುವರು"). ಕರ್ತನು ಬರುವಾಗ ಭೂಮಿಯೂ ಸುಡಲ್ಪಡುವದರಿಂದ, ಆಳುವುದಕ್ಕಾಗಿ ಯಾವ ಭೂಮಿಯೂ ಉಳಿದಿರುವದಿಲ್ಲ (2 ಪೇತ್ರ 3:10-12).

ಕರ್ತನು ಕೊಂಡುಕೊಳ್ಳುವ ಆ ದಿನದಲ್ಲಿ ಕ್ರೈಸ್ತರು ಆತನ ಸಿಂಹಾಸನದ ಮೇಲೆ ಆತನೊಂದಿಗೆ ಆಳುವರು ಮತ್ತು ಜೀವಿಸುವರು (2 ತಿಮೊಥೆ 2:11; ಪ್ರಕಟನೆ 3:21). ಅದು ಆತನು ತನ್ನ ದಿವಾರೋಹಣದ ನಂತರ ಪಂಚಾಶತ್ತಮ ದಿನದಂದು ಜಯಶಾಲಿಯಾಗಿ ತಂದೆಯ ಸಿಂಹಾಸನದ ಮೇಲೆ ಕುಳಿತಂತೆ ಇರುವುದು (ನೋಡಿರಿ ಲೂಕ 22:29; ಕೊಲೊಸ್ಸೆ 1:13).[2] ನ್ಯಾಯತೀರ್ವಿಕೆಯ ನಂತರ ಆತನು ಅಧಿಕಾರವನ್ನು ತನ್ನ ತಂದೆಗೆ ಹಿಂದಿರುಗಿಸುವನು ಮತ್ತು ತಾನೇ ತನಗೆ ಎಲ್ಲಾ ಸಂಗತಿಗಳನ್ನು ಒಪ್ಪಿಸಿದಾತನಿಗೆ ಒಪ್ಪಿಸಿಕೊಡುವನು (1 ಕೊರಿಂಥ 15:28).

ಇನ್ನೊಂದು ಅರ್ಥದಲ್ಲಿ, ನ್ಯಾಯತೀರ್ವಿಕೆಯ ನಂತರ, ಕ್ರಿಸ್ತನು ತನ್ನ ತಂದೆಯೊಂದಿಗೆ ಆತನ ಅಧೀನತೆಯಲ್ಲಿ ಆಳಿಕೆಯನ್ನು ಮುಂದರಿಸುವನು (ಇಬ್ರಿಯ 1:8). ದೇವರ ಸಿಂಹಾಸನವು ಇನ್ನೂ ದೇವರ ಸಿಂಹಾಸನವಾಗಿರುವುದು (ಪ್ರಕಟನೆ 22:1). ಈ ಅರ್ಥದಲ್ಲಿ ಕ್ರೈಸ್ತರು ಸಹ ಎಂದೆಂದಿಗೂ ಕ್ರಿಸ್ತನೊಂದಿಗೆ ಆಳುವದನ್ನು ಮುಂದುವರಿಸುವರು (ಪ್ರಕಟನೆ 22:5).

## ಜೀವಬಾಧ್ಯರ ಪಟ್ಟಿಯಲ್ಲಿ ದಾಖಲಿಸಲ್ಪಡುವುದು

ದೇವರ ಜನರಿಗೆ ನಿತ್ಯವಾದ ಆಶೀರ್ವಾದವು ಇರುವುದರ ಅಂತಿಮ ಭರವಸೆಯು ಆತನ ಮುಂದೆ ಜ್ಞಾಪಕದ ಪುಸ್ತಕವು ಬರೆಯಲ್ಪಟ್ಟದ್ದು (ಮಲಾಕಿ 3:16). ನಿಜವಾಗಿಯೂ ದೇವರು ಯಾವುದನ್ನೂ ಮರೆಯುವದಿಲ್ಲ; ಆದರೆ ಆತನು ಈ ವಾಗ್ದಾನವನ್ನು ಮಾನವ ರೀತಿಯ ರೂಪಕದಲ್ಲಿ (ಅಂದರೆ, ಮಾನವ ಲಕ್ಷಣಗಳ ಮಾತುಗಳಲ್ಲಿ ಪರಿಸ್ಥಿತಿಯನ್ನು ವಿವರಿಸುವುದು) ಕೊಟ್ಟಿದ್ದಾನೆ. ತನಗೆ ಮೆಚ್ಚಿಕೆಯಾದ ರೀತಿಯಲ್ಲಿ ಇರುವವರ ಹೆಸರುಗಳ ಪುಸ್ತಕವನ್ನು ಇಡುವವನಂತೆ ತನ್ನನ್ನು ಪ್ರದರ್ಶಿಸಿಕೊಂಡಿದ್ದಾನೆ.

ಒಂದು ದೃಷ್ಟಿಕೋನದಿಂದ, ಹೆಸರುಗಳು ಜೀವ ಬಾಧ್ಯರ ಪುಸ್ತಕದಲ್ಲಿ ಜಗದುತ್ಪತ್ತಿಯಿಂದಲೇ ಬರೆಯಲ್ಪಟ್ಟಿವೆ (ಪ್ರಕಟನೆ 17:8). ಹೀಗಿದ್ದರೂ, ಅವುಗಳ ಸೇರಿಸುವಿಕೆಯು ಏಕಪಕ್ಷೀಯವಾಗಿರುವದಿಲ್ಲ, ಯಾಕಂದರೆ ದೇವರ ಪೂರ್ವ ಜ್ಞಾನದಲ್ಲಿ, ಆತನ ಪುಸ್ತಕದಲ್ಲಿ ಅವರ ಹೆಸರು ಬರೆಯಲ್ಪಟ್ಟದ್ದು, ಅವರ ನಂಬಿಗಸ್ತಿಕೆಯಿಂದ ಮತ್ತು ಕಾರ್ಯಗಳಿಂದ ನಿರ್ಣಯಿಸಲ್ಪಟ್ಟಿದೆ (ಪ್ರಕಟನೆ 17:14; 22:12). ಅಲ್ಲಿ ಬರೆಯಲ್ಪಡದೇ ಇರುವವರು ಹೊಲೆಯಾದವರೂ, ಅಸಹ್ಯವಾದವರೂ ಮತ್ತು ಸುಳ್ಳಾದವರೂ ಆಗಿದ್ದಾರೆ (ಪ್ರಕಟನೆ 21:27). ಬರೆಯಲ್ಪಟ್ಟ ಹೆಸರುಗಳು ಅಳಿಸಲ್ಪಡಬಹುದೆಂದು ನಮಗೆ ಎಚ್ಚರಿಕೆ ಕೊಡಲ್ಪಟ್ಟಿದೆ (ವಿಮೋಚನಕಾಂಡ 32:33; ಪ್ರಕಟನೆ 3:5).

ಅದ್ಭುತ ಕಾರ್ಯಗಳನ್ನು ಮಾಡುವ ಬಲಕ್ಕಿಂತ ಹೆಚ್ಚು ಮಹತ್ವದ್ದು ಒಬ್ಬನ ಹೆಸರು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಡುವಂಥದ್ದು ಎಂದು ಬೋಧಿಸುವರಿಂದ ಯೇಸುವು ತನ್ನ ಶಿಷ್ಯರನ್ನು ಪ್ರೋತ್ಸಾಹಿಸಿದನು (ಲೂಕ 10:20). ತನ್ನ ಜೊತೆ ಕೆಲಸದವರಲ್ಲಿ ಕೆಲವರ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟದ್ದು ಪೌಲನಿಗೆ ಸಂತೋಷವನ್ನುಂಟುಮಾಡಿತು (ಫಿಲಿಪ್ಪಿ 4:3). ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಸಭೆಯಲ್ಲಿ, ಚೊಚ್ಚಲ ಮಕ್ಕಳು, ಪರಲೋಕದಲ್ಲಿ ಹೆಸರು ಬರೆಯಿಸಿಕೊಂಡಿರುವರು ಎಂದು ಹೇಳಿದನು (ಇಬ್ರಿಯ 12:23).

## ಕ್ರಿಸ್ತನ ಕನ್ಯೆಯಾಗುವುದು

ಕ್ರಿಸ್ತನ ಮತ್ತು ಆತನ ಜನರ ಮಧ್ಯದಲ್ಲಿ ಒಂದು ಮದುವೆಯಂತೆ ನಿಕಟ ಐಕ್ಯತೆಯನ್ನು ಬೈಬಲು ವಿವರಿಸುತ್ತದೆ. ಕೆಟ್ಟು ಹೋದ ಪಾಪಿಯು ಸುವಾರ್ತೆಗೆ ವಿಧೇಯನಾಗುವಾಗ, ಅವನು ಕೂಡಲೇ ಕ್ರಿಸ್ತನ ಮದುಮಗಳ ಭಾಗವಾಗುವನು; ವಾಕ್ಯದಿಂದ ನೀರಿನ ತೊಳೆಯುವಿಕೆಯಿಂದ ಶುದ್ಧೀಕರಿಸಲ್ಪಡುವನು (ಎಫೆಸ 5:26). ಒಮ್ಮೆ ಶುದ್ಧೀಕರಿಸಲ್ಪಟ್ಟು ಮತ್ತು ಪರಿಶುದ್ಧೀಕರಿಸಲ್ಪಟ್ಟು, ಕ್ರೈಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಾತನೊಂದಿಗೆ ವಿವಾಹವಾಗುವನು (ರೋಮಾಪುರ 7:4). ಹೀಗೆ ಅವನು "ಕಳಂಕ, ಸುಕ್ಕು, ಮುಂತಾದದ್ದೆಂದೂ ಇಲ್ಲದೆ" (ಎಫೆಸ 5:27). ಪರಿಶುದ್ಧ ಹೆಂಡತಿಯ (ಕ್ರಿಸ್ತನ ಸಭೆಯ) ಭಾಗವಾಗುವನು. ಮಾನವ ವಿವಾಹದ ಆನಂದವು ಹೀಗೆ ಕ್ರಿಸ್ತನೊಂದಿಗೆ ಐಕ್ಯವಾಗುವ ಪಾಪಿಯ ಆನಂದದ ಹೋಲಿಕೆಯಂತೆ ಉಪಯೋಗಸಲ್ಪಟ್ಟಿರುವುದು.

ಕ್ರೈಸ್ತರು ಕ್ರಿಸ್ತನೊಂದಿಗೆ ವಿವಾಹವಾಗುವ ದೃಷ್ಟಾಂತವು ಬರಲಿಕ್ಕಿದ್ದ ಜಗತ್ತಿನ ಬಗ್ಗೆ ಒಬ್ಬನು ಯೋಚಿಸುವಾಗ ಬದಲಾಗುತ್ತದೆ. ಆ ದೃಷ್ಟಿಕೋನದಿಂದ, ಕ್ರೈಸ್ತನು ಇನ್ನೂ ಕ್ರಿಸ್ತನೊಂದಿಗೆ ವಿವಾಹವಾಗಿರುವದಿಲ್ಲ, ಆದರೆ ಮುಂದಿನ ಜೀವನದಲ್ಲಿ ಮದುವೆಯೊಂದಿಗೆ ಪೂರ್ತಿಗೊಳ್ಳಲಿರುವುದು. ಕೊರಿಂಥದವರು ಸಭೆಯ ಸದಸ್ಯರಾದಾಗ (ಕೇಳುವದರಿಂದ, ನಂಬುವದರಿಂದ ಮತ್ತು ಬಾಪ್ತಿಸ್ಮ ಹೊಂದುವದರಿಂದ; ಅಪೊಸ್ತಲರ

ಕೃತ್ಯಗಳು 18:8; 1 ಕೊರಿಂಥ 1:1, 2), ಅವರು ಯೇಸುವಿನ ಕನ್ಯೆಯರಾದರು. ಅವರನ್ನು ಕೂಡಿಸಿದವನು ಪೌಲನು, ಹೀಗೆ ಹೇಳಿದನು, "ಯಾಕಂದರೆ ದೇವರಲ್ಲಿರುವಂಥ, ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ; ನಿಮ್ಮನ್ನು ಕ್ರಿಸ್ತನೆಂಬ ಒಬ್ಬ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ" (2 ಕೊರಿಂಥ 11:2). "ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂದಿದೆ; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ" (ಪ್ರಕಟನೆ 19:7) ಆಗ ವಿವಾಹದ ದಿನವು ಲೋಕದ ಅಂತ್ಯವಾಗಿರುವುದು ಕೊರಿಂಥದವರು ತಮ್ಮನ್ನು ದೇಹದ ಹಾಗೂ ಆತ್ಮದ ಎಲ್ಲಾ ಕೊಳೆಯನ್ನು ತೆಗೆದುಹಾಕಿ ದೇವರ ಭಯದಿಂದ ಕೂಡಿದವರಿಗೆ ಪರಿಶುದ್ಧತೆಯನ್ನು ಸಿದ್ಧಿಗೆ ತರಬೇಕು (2 ಕೊರಿಂಥ 7:1) ಆಗ ವದುವುಗಳ ಮದುವೆಯ ಉಡುಪಿನಲ್ಲಿ ಅಲಂಕರಿಸಲ್ಪಡುವವು ("ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರುಮಡಿಯನ್ನು ಧರಿಸಿಕೊಳ್ಳುವದಕ್ಕೆ ಆಕೆಗೆ ಅನುಗ್ರಹಿಸೋಣವಾಗಿತ್ತು. ಆ ನಾರುಮಡಿ ಅಂದರೆ ದೇವ ಜನರ ಸತ್ಕಾರ್ಯಗಳೇ" ಪ್ರಕಟನೆ 19:8). ಈ ಗುರಿಗಳನ್ನು ಸಾಧಿಸಲು ಪ್ರಯತ್ನಿಸುವಲ್ಲಿ, ಅವರು ಮದುಮಗನ ಬರೋಣಕ್ಕಾಗಿ ಸಿದ್ಧರಾಗಲು ತಮ್ಮ ಎಲ್ಲಾ ಶಕ್ತಿಗಳನ್ನು ಕೇಂದ್ರೀಕರಿಸುವರು. ಅದು ಎಲ್ಲಾ ದಿನಗಳ ದಿನವಾಗಿರುವುದು. "ಯಜ್ಞದ ಕುರಿಯಾದಾತನ ವಿವಾಹದ ಔತಣಕ್ಕೆ ಕರೆಸಿಕೊಂಡವರು ಧನ್ಯರು" (ಪ್ರಕಟನೆ 19:9) ಎಂದು ಯೋಹಾನನು ಬರೆದನು.

ಆ ಸಂತೋಷದ ಮದುವೆಯ ಔತಣವು ಒಂದು ಮದುವೆಯ ಭೋಜನದಲ್ಲಿ ಒಬ್ಬ ಅತಿಥಿಯಾಗಿರುವದಕ್ಕಿಂತಲೂ ಕ್ರೈಸ್ತನಿಗೆ ಹೆಚ್ಚಾದದ್ದಾಗಿರುತ್ತದೆ, ಯಾಕಂದರೆ ಆ ದಿನದಂದು ಕ್ರೈಸ್ತನು ತನ್ನನ್ನು ಕ್ರಿಸ್ತನ ಮದುಮಗಳಾಗಿರುವದನ್ನು ನೋಡುತ್ತಾನೆ. ಪರಿಣಾಮವಾಗಿ, ತನ್ನ ಮದುವೆಯ ದಿನಕ್ಕಾಗಿ ತನ್ನನ್ನು ಶುದ್ಧವಾಗಿ ಇಟ್ಟುಕೊಂಡ ಸ್ತ್ರೀಯ ಹೃದಯದಲ್ಲಿರುವಂಥ ಉಕ್ಕಿ ಬರುವ ಆನಂದವು ಅವನಿಗಿರುವುದು.

## ಮುಕ್ತಾಯ

ನೀನು ಈಗಾಗಲೇ ಕರ್ತನ ಸಭೆಯ ಸದಸ್ಯನಾಗಿರದಿದ್ದರೆ, ಕೂಡಲೇ ನೀನು ಸದಸ್ಯನಾಗಬೇಕೆಂದು ನಿನ್ನನ್ನು ಒತ್ತಾಯಿಸುತ್ತೇವೆ. ನೀನು ಅಪನಂಬಿಗಸ್ತ ಸದಸ್ಯನಾಗಿದ್ದರೆ, ನಿನ್ನ ಪ್ರಥಮ ಪ್ರೀತಿಗೆ ಹಿಂದಿರುಗು ಎಂದು ನಿನ್ನನ್ನು ಬೇಡಿ ಕೊಳ್ಳುತ್ತೇವೆ (ಪ್ರಕಟನೆ 2:4, 5). ಈ ಪಾಠವನ್ನು ಅಧ್ಯಯನ ಮಾಡುವ ಎಲ್ಲರೂ ಒಂದು ದಿನ "ಕರ್ತನ ಮದುವೆಯ ಭೋಜನದಲಿ"! ಹಾಜರಿರಬೇಕೆಂಬುದು ನಮ್ಮ ಪ್ರಾರ್ಥನೆಯಾಗಿದೆ.

---

ಟಿಪ್ಪಣಿಗಳು

[1]ಪರಿಶುದ್ಧ ಬರಹದಲ್ಲಿ "ಪ್ಯಾರಡೈಜ್" ಪದಕ್ಕೆ ಇನ್ನೊಂದು ಅರ್ಥವಿರುತ್ತದೆ (ಲೂಕ 23:43; 2 ಕೊರಿಂಥ 12:4), ಆದರೆ ಈ ಎರಡನೆಯ ಅರ್ಥವು ಈ ಪಾಠದಲ್ಲಿ ಉಪಯೋ ಗಿಸಲ್ಪಟ್ಟಿರುವದಿಲ್ಲ. [2]ಯೇಸುವು ಈಗ ತನ್ನ ತಂದೆಯ ಸಿಂಹಾಸನದ ಮೇಲೆ ಇರುವನು, ಆತನ ಸ್ವಂತ ಸಿಂಹಾಸನದ ಮೇಲೆ ಅಲ್ಲ ಎಂದು ಊಹಿಸುವದರಿಂದ ಪ್ರಿಮಿಲ್ಲೇನ್ನಿಯಾಲಿಸ್ಟರು ಪ್ರಕಟನೆ 3:21ನ್ನು ತಪ್ಪಾಗಿ ಉಪಯೋಗಿಸುತ್ತಾರೆ. ಎರಡು ಸಿಂಹಾಸನಗಳಿರುವದಿಲ್ಲ; ಎರಡು ಸರ್ವಾಧಿಕಾರಗಳಿರುವದಿಲ್ಲ. ಹೋಲಿಕೆಯಿಂದ, ದಾವೀದನ ಸಿಂಹಾಸನವು (1 ಅರಸುಗಳು 1:35) ಕರ್ತನ ಸಿಂಹಾಸನವಾಗಿತ್ತು (1 ಪೂರ್ವಕಾಲವೃತ್ತಾಂತ 29:23); ಎರಡು ಸಿಂಹಾಸನಗಳು ಇರಲಿಲ್ಲ.

### ಒಂದು ಇಬ್ಬಗೆಯ ಪೌರತ್ವ

ಅಪೊಸ್ತಲ ಪೌಲನು ರೋಮ್‌ದಲ್ಲಿ ಇಲ್ಲವೇ ರೋಮನ್ ಕಾಲನಿಯಲ್ಲಿ ಜನಿಸಿರದಿದ್ದರೂ ರೋಮನ್ ಪೌರನಾಗಿದ್ದನು. ಅವನ ಪೌರತ್ವವು ಬಾಧ್ಯತೆಯಾಗಿ ಪಡೆದದ್ದಾಗಿತ್ತು; ಅವನ ತಂದೆಗೆ ಆ ಗೌರವವಿತ್ತು ಮತ್ತು ಆದುದರಿಂದಲೇ ಪೌಲನು "ನಾನಾದರೋ ಹಕ್ಕುದಾರನಾಗಿ ಹುಟ್ಟಿದವನು" ಎಂದು ಹೇಳಬಲ್ಲವನಾಗಿದ್ದನು (ಅಪೊಸ್ತಲರ ಕೃತ್ಯಗಳು 22:28ಬಿ). ಪೌಲನ ರೋಮಾ ಪೌರತ್ವವು ಅವನಿಗೆ ದೊಡ್ಡ ಅವಕಾಶಗಳನ್ನು ಕೊಟ್ಟಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 16:37; 22:25-28; 23:12-27; 25:11, 12); ಹಾಗಿದ್ದರೂ ಅದಕ್ಕಿಂತ ಹೆಚ್ಚು ಮೌಲ್ಯವುಳ್ಳದ್ದು, ಪರಲೋಕ ದಲ್ಲಿಯ ಅವನ ಪೌರತ್ವವಾಗಿತ್ತು (ಫಿಲಿಪ್ಪಿ 3:20). ಪೌಲನು ತನ್ನ ಪಾಪಗಳನ್ನು "ತೊಳೆದು ಕೊಳ್ಳಲು" ಬಾಪ್ತಿಸ್ಮಹೊಂದಿದ ಕ್ಷಣದಿಂದ (ಅಪೊಸ್ತಲರ ಕೃತ್ಯಗಳು 22:16), ಅವನು ಇಬ್ಬಗೆಯ ಪೌರತ್ವವನ್ನು, ಒಂದು ರೋಮ್‌ದಲ್ಲಿ ಮತ್ತು ಒಂದು ಪರಲೋಕದಲ್ಲಿ ದೇವಜನರೊಂದಿಗೆ ಒಂದೇ ಸಂಸ್ಥಾನದಲ್ಲಿ ಅನುಭವಸಿದನು (ಎಫೆಸ 2:19).

ಲುದ್ಯಳು ಮತ್ತು ಆಕೆಯ ಮನೆಯವರು, ಸುವಾರ್ತೆಯನ್ನು ಕೇಳಿ ವಿಧೇಯ ರಾದದ್ದರಲ್ಲಿ (ಅಪೊಸ್ತಲರ ಕೃತ್ಯಗಳು 16:14, 15), ಪರಲೋಕದಲ್ಲಿ "ಜೊತೆ ಪೌರರಾದರು." ಫಿಲಿಪ್ಪಿಯ ಸೆರೆಮನೆ ಅಧಿಕಾರಿಗೂ (ಅಪೊಸ್ತಲರ ಕೃತ್ಯಗಳು 16:25-33) ಮತ್ತು ಅವನ ಮನೆಯಲ್ಲಿದ್ದವರಿಗೂ ಇದು ಸತ್ಯವಾಯಿತು. ಇಂದು ಲೋಕದಲ್ಲೆಲ್ಲಾ ಸಾವಿರಾರು ಜನರು, ನಂಬಿ, ಮಾನಸಾಂತರ ಪಟ್ಟು; ಬಾಪ್ತಿಸ್ಮ ಹೊಂದಿದವರು (ಮತ್ತಾಯ 28:18-20; ಮಾರ್ಕ 16:15, 16; ಲೂಕ 24:46, 47), ಈಗ ಎರಡು ರೀತಿಯ ಪೌರತ್ವಗಳನ್ನು ಅನುಭವಿಸುತ್ತಲಿದ್ದಾನೆ. ಯಾವುದೋ ಭೂಲೋಕದ ವಾಸಸ್ಥಳಕ್ಕಾಗಿ ಅವರು ಮುನ್ನೋಡುತ್ತಿರುವದಿಲ್ಲ, ಆದರೆ "ಅಸ್ತಿವಾರಗ ಳುಳ್ಳ ಪಟ್ಟಣವನ್ನು ಅಂದರೆ ದೇವರು ಸಂಕಲ್ಪಿಸಿ ನಿರ್ಮಿಸಿದ ಪಟ್ಟಣವನ್ನು ಎದುರು ನೋಡುತ್ತಿರುವರು" (ಇಬ್ರಿಯ 11:10), ಸ್ವತಂತ್ರವಾದ, ಮೇಲಿನ ಪಾರಲೌಕಿಕ ಯೆರೂಸಲೇಮನ್ನು ಎದುರು ನೋಡುತ್ತಿರುವರು (ಗಲಾತ್ಯ 4:26; ಇಬ್ರಿಯ 12:22). ಇಲ್ಲಿ ನಮಗೆ ನಿತ್ಯ ಪಟ್ಟಣವಿರುವದಿಲ್ಲ, ಆದರೆ ಇವುಗಳಿಂದ "ಇನ್ನು ಮುಂದೆ ಆಗುವ ಪಟ್ಟಣವನ್ನು ಹಾರೈಸುತ್ತಾ ಇದ್ದೇವೆ" (ಇಬ್ರಿಯ 3:14ಬಿ).

## ಒಂದು ಪರಲೋಕದ ಗಮ್ಯಕ್ಕೆ ಒಂದು ಪೂರ್ವಾಗತ್ಯ ಶರತ್ತು: ನಂಬಿಗಸ್ತಿಕೆ

"ಆತನ ದೇಹವಾಗಿರುವ" ಮತ್ತು ಆತನು "ರಕ್ಷಕನಾಗಿರುವ" ಸಭೆಯ ಸದಸ್ಯನಾಗಿರುವುದು ಅತ್ಯಾವಶ್ಯಕವಾದದ್ದಾಗಿದೆ (ಎಫೆಸ 1:22, 23; 5:23), ಪರಲೋಕದಲ್ಲಿ ನಿತ್ಯವಾದ ಅಂತಿಮ ಸ್ಥಿತಿಗೆ ಒಬ್ಬನಿಗೆ ಭರವಸೆಕೊಡಲು ಕೇವಲ ಸದಸ್ಯನಾಗಿರುವುದು ಸಾಕಷ್ಟಾಗಿರುವದಿಲ್ಲ. ಪರಲೋಕದಲ್ಲಿ ಒಂದು ಮನೆಗೆ ನಂಬಿಗಸ್ತಿಕೆಯು ಪೂರ್ವಾಗತ್ಯ ಶರತ್ತಾಗಿದೆ.

ತಮ್ಮ ಜವಾಬ್ದಾರಿಕೆಗಳಲ್ಲಿ ದುಃಖಕರವಾಗಿ ಬಿದ್ದುಹೋದ ಸಭಾಸದಸ್ಯರ ಉದಾಹರಣೆಗಳಿಂದ ಬೈಬಲ್ ತುಂಬಿಕೊಂಡಿರುತ್ತದೆ. ಅವರು ಮಾನಸಾಂತರ ಪಡದಿದ್ದರೆ, ಅವರು "ಬೆಂಕಿಯ ಆವಿಗೆಯೊಳಗೆ" ಎಸೆಯಲ್ಪಡುವರು (ಮತ್ತಾಯ 13:41, 42). ಎಲ್ಲಾ ಸುಳ್ಳುಗಾರರು, ಸಭಾಸದಸ್ಯರಾಗಿರಲಿ, ಇಲ್ಲದಿರಲಿ, ಅವರ ನಿತ್ಯವಾದ

ಅಂತಿಮಸ್ಥಿತಿಯು ಪರಲೋಕವಾಗಿರುವದಿಲ್ಲ ಆದರೆ "ಬೆಂಕಿಗಂಧಕಗಳು ಉರಿಯುವ ಕೆರೆಯಾಗಿರುವುದು, ಅದು ಎರಡನೆಯ ಮರಣವು" (ಪ್ರಕಟನೆ 21:8). ಯೆರೂಸಲೇಮಿನಲ್ಲಿ ಸಭೆಯ ಸದಸ್ಯರಾದ, ಅನನೀಯ ಮತ್ತು ಸಫೈರರು ಸಾಯುತ್ತಿರುವಂತೆ. ದೇವರ ಮುಂದೆ ಮಾನಸಾಂತರ ಪಡಬೇಕಿತ್ತೆಂದು ನಾವು ಭಕ್ತಿಯಿಂದ ನಿರೀಕ್ಷಿಸಬಹುದು (ಅಪೊಸ್ತಲರ ಕೃತ್ಯಗಳು 5:1-11). ಅಂತಿಮ ಪರಿಣಾಮವು ಏನೇ ಆದರೂ, ಪರಿಶುದ್ಧ ಚರಿತ್ರೆಯಲ್ಲಿ ಅವರ ಕಥೆಯು ಮುಕ್ತಾಯಗೊಂಡ ರೀತಿಯಿಂದ, "ಒಮ್ಮೆ ರಕ್ಷಿಸಲ್ಪಟ್ಟವರು ಯಾವಾಗಲೂ ರಕ್ಷಿಸಲ್ಪಟ್ಟಿರುವರು" ಎಂಬುದು ಬೈಬಲಿನ ಬೋಧನೆಯಲ್ಲ ಎಂಬುದನ್ನು ತಿಳಿದುಕೊಳ್ಳುತ್ತೇವೆ.

ಸಮರ್ಯದಮಂತ್ರವಾದಿಯಾದ ಸೀಮೋನನು, ಪ್ರತಿಯೊಂದು ಮಂತ್ರತಂತ್ರವನ್ನು ತಿಳಿದವನಾಗಿದ್ದು, ಫಿಲಿಪ್ಪನ ಅದ್ಭುತಕಾರ್ಯಗಳನ್ನು ನೋಡುತ್ತಿದ್ದಾಗ, ಫಿಲಿಪ್ಪನ ಪ್ರಸಂಗಿಸುವಿಕೆಯು ದೇವರದೆಂದು ದೃಢಪಡಿಸಿಕೊಳ್ಳುವವನಾದನು. ಅದರ ಪರಿಣಾಮವಾಗಿ, ಅವನು ಮಾರ್ಪಾಟು ಹೊಂದಿದನು, ನಂಬಿದನು ಮತ್ತು ಬಾಪ್ತಿಸ್ಮ ಹೊಂದಿದನು (ಅಪೊಸ್ತಲರ ಕೃತ್ಯಗಳು 8:13). ಅವನ ಅನಂತರದ ನಡತೆಯು ಅವನು ನಿಜವಾಗಿಯೂ ಮಾರ್ಪಾಟು ಹೊಂದಿರಲಿಲ್ಲ ಎಂಬುದನ್ನು ತೋರಿಸಿತು ಎಂದು ಹೇಳುವುದು ಅಪೊಸ್ತಲ ಪೇತ್ರನ ಮೇಲೆ ಸಂಶಯಪಟ್ಟಂತೆ ಆಗುತ್ತದೆ. ಪೇತ್ರನು ಪಂಚಾಶತ್ತಮದ ದಿನದಂದು, ಮಾರ್ಪಾಟು ಹೊಂದದವರಿಗೆ ಮಾನಸಾಂತರ ಪಡಲು ಮತ್ತು ಬಾಪ್ತಿಸ್ಮ ಹೊಂದಲು ಹೇಳಿದನು (ಅಪೊಸ್ತಲರ ಕೃತ್ಯಗಳು 2:38). ಪೇತ್ರನು ಅವನೊಂದಿಗೆ ಮಾತಾಡಿದಾಗ, ಮಂತ್ರವಾದಿಯಾದ ಸೀಮೋನನು ಇನ್ನೂ ಮಾರ್ಪಡದೇ ಇದ್ದವನಾಗಿದ್ದರೆ, ಯೆರೂಸಲೇಮಿನಲ್ಲಿ ಜನ ಸಮೂಹಕ್ಕೆ ಹೇಳಿದಂತೆ ಅವನಿಗೆ ಮಾನಸಾಂತರ ಪಡಲು ಬಾಪ್ತಿಸ್ಮ ಹೊಂದಲು ಪೇತ್ರನು ಹೇಳುತ್ತಿದ್ದನು. ಅದರ ಬದಲು, ಪೇತ್ರನು ಅವನಿಗೆ ಪಶ್ಚಾತ್ತಾಪಪಟ್ಟು, ಪ್ರಾರ್ಥನೆ ಮಾಡು ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 8:22). ಬಾಪ್ತಿಸ್ಮವು ಒಬ್ಬನನ್ನು ಸಭೆಯೊಳಗೆ ಇಡುವದರಿಂದ (ನೋಡಿರಿ 1 ಕೊರಿಂಥ 12:13), ಮತ್ತು ಪೇತ್ರನು ಸೀಮೋನನಿಗೆ ಬಾಪ್ತಿಸ್ಮ ಹೊಂದಲು ಹೇಳದೇ ಇದ್ದುದ್ದರಿಂದ, ಪೇತ್ರನು ಸೀಮೋನನ್ನು ಸಭೆಯ ಸದಸ್ಯನೆಂದು ಸ್ಪಷ್ಟವಾಗಿ ಯೋಚಿಸಿದನು. ಹೀಗೆ ಅವನು ಅವನನ್ನು ಪಾಪ ಮಾಡುವ ಕ್ರೈಸ್ತನೆಂದು ಕರೆದನು, ಆದರೆ ಕ್ರೈಸ್ತನಲ್ಲದವನು ಎಂದು ಕರೆಯಲಿಲ್ಲ.

ಸೀಮೋನನ ಬಾಪ್ತಿಸ್ಮದ - ನಂತರ ಸ್ಥಿತಿಯು "ಹಾನಿಕರವಾದ ವಿಷವೂ ದುಷ್ಟತ್ವದಲ್ಲಿ ಬಿಗಿಯುವ ಬಂಧನವೂ" ಆಗಿದ್ದುದು (ಅಪೊಸ್ತಲರ ಕೃತ್ಯಗಳು 8:23), ಸಭೆಯ ಎಲ್ಲಾ ಸದಸ್ಯರೂ ವಾಗ್ದಾತ್ತ ದೇಶಕ್ಕೆ ಹೊರಟವರಲ್ಲಿ ಎಂಬುದನ್ನು ಪ್ರದರ್ಶಿಸುತ್ತದೆ. ಸಭಾಸದಸ್ಯರಿಗೆ ಮಾತ್ರವೇ ಆ ವಾಗ್ದಾನವು ಸತ್ಯವಾಗಿದೆ. ಅದರೆ, ಅವರ ಪರವಾಗಿ ನಂಬಿಗಸ್ತಿಕೆಯು ಪರಲೇಕದಲ್ಲಿ ನಿತ್ಯತ್ವದ ದೆಸೆಗೆ ನಿಜವಾದ ಪೂರ್ವಪರ ಶರತ್ತು ಆಗಿದೆ.

ಪ್ರಕಟನೆ 2ರಲ್ಲಿಯ ಕಥೆಯು ಪಾಪದಲ್ಲಿದ್ದ ಇಡೀ ಸಭೆಯದಾಗಿರುತ್ತದೆ. ಎಫೆಸದಲ್ಲಿಯ ಸಭೆಯು ತನ್ನ ಪ್ರಥಮ ಪ್ರೀತಿಯನ್ನು ಕಳೆದುಕೊಂಡಿತ್ತು. ಇದು ಪೌಲನು ಮೂರು ವರ್ಷಗಳ ವರೆಗೆ ಕಣ್ಣೀರುಗಳೊಂದಿಗೆ ಹಗಲೂ ರಾತ್ರಿ ದುಡಿದ ಸಭೆಯಾಗಿತ್ತು (ಕ್ರಿ.ಶ. 54-57). ಅಲ್ಲಿದ್ದ ಕ್ರೈಸ್ತರು ಕ್ರಿ.ಶ. 62ರಲ್ಲಿ ತಮ್ಮ ನಂಬಿಗಸ್ತಿಕೆಯ ಮತ್ತು ಪ್ರೀತಿಗಾಗಿ ಅಭಿನಂದಿಸಲ್ಪಟ್ಟಿದ್ದರು (ಎಫೆಸ 1:15). ಹಾಗಿದ್ದರೂ, ಪ್ರಕಟನೆಯು ಬರೆಯಲ್ಪಟ್ಟಾಗ, ಆ ಸಭೆಯ ಸದಸ್ಯರು ಕರ್ತನಿಂದ ಸಂಪೂರ್ಣವಾಗಿ ತಿರಸ್ಕರಿಸಲ್ಪಡುವ ಮರಣಾಂತಿಕ ಗಂಡಾಂತರದಲ್ಲಿದ್ದರು (ನೋಡಿರಿ ಪ್ರಕಟನೆ 2:5).

ಹಾಗೆಯೇ, ಪೆರ್ಗಮದಲ್ಲಿಯ ಸಭೆಯು, ಯೇಸುವು ಅವರನ್ನು "ನನ್ನ ಬಾಯ ಕತ್ತಿಯಿಂದ" (ಪ್ರಕಟನೆ 2:16) ಹೆದರಿಸುವಷ್ಟು ತಪ್ಪಾಗಿ ನಡೆದುಕೊಂಡಿದ್ದರು. ಥುವತೈರದಲ್ಲಿಯ ಸಭೆಯನ್ನು ಕುರಿತು, ಧರ್ಮ ಭ್ರಷ್ಟತೆಯು ಕಠಿಣವಾದದ್ದಾಗಿದ್ದರೂ, ಕರ್ತನು ಮನ್ನಣೆಕೊಟ್ಟ ಕೆಲವರನ್ನು ಅಲ್ಲಿ ನೋಡಿದನು (ಪ್ರಕಟನೆ 2:24). ಹಾಗೆಯೇ, ಸಾರ್ದಿಸ್‌ನಲ್ಲಿಯ ಸಭೆಯು, ಕರ್ತನು ಅದರ ಆತ್ಮಿಕ ಸ್ಥಿತಿಯನ್ನು ನೋಡಿದಂತೆ, ಸತ್ತು ಹೋದ ಸ್ಥಿತಿಯಲ್ಲಿ ಇತ್ತು (ಪ್ರಕಟನೆ 3:1-4).

ಕರ್ತನ ಸಭೆಯು ಎಂದೂ ಒಟ್ಟಾಗಿ ರಕ್ಷಿಸಲ್ಪಟ್ಟಿರುವದಿಲ್ಲ. ಇಲ್ಲವೇ ಒಬ್ಬನು ಆ ರೀತಿಯಲ್ಲಿ ತಪ್ಪಿಹೋಗಿರುವದಿಲ್ಲ. ಉಗುರು ಬೆಚ್ಚಗಿನ ಲವೊದಿಕೀಯದ ಸಭೆಯ ಸದಸ್ಯರೂ ಸಹ, ಅದರ ಬಗ್ಗೆ ಯಾವುದೇ ಒಳ್ಳೇ ಸಂಗತಿಯು ಹೇಳಲ್ಪಟ್ಟಿರುವದಿಲ್ಲ, ಮಾನಸಾಂತರ ಪಡಲು ಒತ್ತಾಯಿಸಲ್ಪಟ್ಟರು. ಯೇಸುವು ಹೇಳಿದ್ದು,

> *ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟಮಾಡುವೆನು, ಅವನು ನನ್ನ ಸಂಗಡ ಊಟಮಾಡುವನು. ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯ ಹೊಂದುವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತು ಕೊಳ್ಳುವಂತೆ ಮಾಡುವೆನು (ಪ್ರಕಟನೆ 3:20, 21).*

© 2009 Truth for Today